### ಮಠಾಧೀಶರು ಕಾವಿ ಬಿಟ್ಟು ಚಳವಳಿ ಮಾಡಲಿ: ಮೇಲ್ಮನೆಯಲ್ಲಿ ಬಿರುಸಿನ ಚರ್ಚೆ

# ಮೀಸಲಾತಿ ಹೋರಾಟಗಳಿಗೆ ಸಚಿವರ ಕುಮ್ಮಕ್ಕು

ವಿಧಾನಪರಿಷತ್ತು: 'ಮೀಸಲಾತಿ ಹೋರಾಟಗಳಲ್ಲಿ ತೊಡಗಿಸಿಕೊಂಡಿರುವ ಸ್ವಾಮೀಜಿಗಳು ಕಾವಿ ತೊರೆಯಲಿ, ಈ ಹೋರಾಟಗಳಿಗೆ ಕೆಲ ಸಚಿವರೇ ಕುಮ್ಮಕ್ಕು ನೀಡುತ್ತಿದ್ದಾರೆ. ಇಡೀ ರಾಜ್ಯ ಮೀಸಲಾತಿಯಲ್ಲಿ ಬೆಂದು ಹೋಗುತ್ತಿದೆ. ಸಮುದಾಯಗಳ ನಡುವೆ ಸಂಘರ್ಷದ ವಾತಾವರಣ ನಿರ್ಮಾಣವಾಗಿದೆ, ಹೋರಾಟಗಳಿಗೆ 'ಫುಲ್ ಸ್ಟಾಪ್' ಹಾಕಬೇಕಿದೆ. ಸರ್ಕಾರ ರಚಿಸಿದ ತ್ರಿಸದಸ್ಯ ಸಮಿತಿಯ ಅವಶ್ಯಕತೆಯಿಲ್ಲ'

ಕಾಂಗ್ರೆಸ್‌ನ ಕೆ.ಸಿ. ಕೊಂಡಯ್ಯ, ಎಸ್.ಆರ್. ಪಾಟೀಲ್, ಆರ್. ಧರ್ಮಸೇನಾ, ಜೆಡಿಎಸ್‌ನ ಮರಿತಿಬ್ಬೇಗೌಡ, ಬಿಜೆಪಿಯ ಕೆ.ಪಿ ನಂಜುಂಡಿ, ಎಚ್. ವಿಶ್ವನಾಥ್ ಹಿಂದುಳಿದ ವರ್ಗಗಳ ಆಯೋಗದ ಸಮೀಕ್ಷಾ ವರದಿ ಬಿಡುಗಡೆ ಕುರಿತು ವಿಷಯ ಪ್ರಸ್ತಾಪಿಸಿದಾಗ ವಿವಿಧ ಸಮುದಾಯಗಳು ಮೀಸಲಾತಿಗೆ ಆಗ್ರಹಿಸಿ ನಡೆಸುತ್ತಿರುವ ಹೋರಾಟದ ಬಗ್ಗೆ ಮೇಲ್ಮನೆಯಲ್ಲಿ ಈ ಮಾತುಗಳು ಕೇಳಿ ಬಂದವು.

ಜೆಡಿಎಸ್‌ನ ಮರಿತಿಬ್ಬೇಗೌಡ, ಸ್ವಾಮೀಜಿಗಳ ಬಗ್ಗೆ ಗೌರವವಿದೆ. ಮೀಸಲಾತಿ ಹೋರಾಟದಲ್ಲಿ ತೊಡಗಿಸಿಕೊಂಡಿರುವ ಕೆಲ ಸ್ವಾಮೀಜಿಗಳು ಸರ್ಕಾರಕ್ಕೆ ಧಮಕಿ ಹಾಕುತ್ತಿದ್ದಾರೆ. ಬಸವಣ್ಣನ ತತ್ವ ಅರ್ಥ ಮಾಡಿಕೊಳ್ಳದೇ, ಅಂಬೇಡ್ಕರ್ ಸಂವಿಧಾನ ತಿಳಿದುಕೊಳ್ಳದೇ ಹೋರಾಟಗಳು ನಡೆಯುತ್ತಿವೆ. ಇವರಲ್ಲಿ ಸ್ವಾಮೀಜಿಗಳು ಪಾಲ್ಗೊಳ್ಳುತ್ತಿರುವುದೇ ಆದಲ್ಲಿ ಕಾವಿ ತೊರೆದು ಸ್ವಾಮೀಜಿಗಳು ಚಳವಳಿಯಲ್ಲಿ ಪಾಲ್ಗೊಳ್ಳಲಿ. ಮೀಸಲಾತಿ ಹೋರಾಟಗಳಿಗೆ ಕೆಲ ಸಚಿವರೇ ಕುಮ್ಮಕ್ಕು ನೀಡುತ್ತಿದ್ದಾರೆ. ಇದನ್ನು ನಾನು ಖಂಡಿಸುತ್ತೇನೆ ಎಂದರು. ಸ್ವಾಮೀಜಿಗಳು ಕಾವಿ ತೊರೆಯಲಿ ಎಂಬ ಮಾತಿಗೆ ಕೆಲ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

ಆಯೋಗದ ವರದಿ ಸ್ವೀಕರಿಸಲಾಗುವುದು: ಮುಖ್ಯಮಂತ್ರಿಗಳ ಪರವಾಗಿ ಉತ್ತರ ನೀಡಿದ ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ, ಹಿಂದಿನ ಅಧ್ಯಕ್ಷ ಕಾಂತರಾಜ್ ಅವರ ಅಧಿಕಾರಾವಧಿ 2019ರ ನ.21ರಂದು ಮುಗಿದಿದ್ದು, ಅವರು ವರದಿ ಸಲ್ಲಿಕೆ ಮಾಡಿರಲಿಲ್ಲ. ಈಗ ಜಯಪ್ರಕಾಶ್ ಹೆಗ್ಡೆಯವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಈ ಕುರಿತು ಆಯೋಗದ ಅಧ್ಯಕ್ಷರು ಮತ್ತು ಮುಖ್ಯಮಂತ್ರಿಯವರೊಂದಿಗೆ ಚರ್ಚೆ ಮಾಡುವೆ. ಈ ಬಗ್ಗೆ ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಲಾಗುವುದು. ಆದಷ್ಟು ಬೇಗ ಆಯೋಗದಿಂದ ವರದಿ ಪಡೆದುಕೊಳ್ಳಲಾಗುವುದು ಎಂದು ಉತ್ತರಿಸಿದರು.

## ಒಕ್ಕಲಿಗರಿಗೆ ಅನ್ಯಾಯವಾಗಿದೆ: ತೇಜಸ್ವಿನಿ

ಹಿಂದುಳಿದ ವರ್ಗಗಳ ಆಯೋಗದ ವರದಿ ಬಿಡುಗಡೆಗೆ ನನ್ನ ವಿರೋಧವಿದೆ. ಏಕೆಂದರೆ, ವರದಿಯಲ್ಲಿ ಕೆಲವು ನ್ಯೂನತೆಗಳಿದ್ದು, ಅದರಿಂದ ಅತಿದೊಡ್ಡ ಒಕ್ಕಲಿಗ ಸಮುದಾಯಕ್ಕೆ ಅನ್ಯಾಯವಾಗಲಿದೆ. ಬೇರೆಯವರಂತೆ ನಮ್ಮ ಸ್ವಾಮೀಜಿಗಳು ಕಾನೂನು ಕೈಗೆತ್ತಿಕೊಳ್ಳುವುದಿಲ್ಲ. ಒಕ್ಕಲಿಗ ಸಮುದಾಯದವರಿಗಾಗಿ ವರದಿ ಬಿಡುಗಡೆಯನ್ನು ನಾನು ವಿರೋಧಿಸುತ್ತೇನೆ. ನ್ಯೂನತೆಗಳನ್ನು ಸರಿಪಡಿಸಿ ವರದಿ ಬಿಡುಗಡೆಗೊಳಿಸಬೇಕು ಎಂದು ಬಿಜೆಪಿಯ ತೇಜಸ್ವಿನಿಗೌಡ ಆಗ್ರಹಿಸಿದರು.

ಮೀಸಲಾತಿ ಹೋರಾಟಗಳಿಗೆ 'ಫುಲ್‌ಸ್ಟಾಪ್' ಹಾಕಬೇಕಾದರೆ ಹಿಂದುಳಿದ ವರ್ಗಗಳ ಆಯೋಗದ ವರದಿ ಬಿಡುಗಡೆಗೊಳಿಸಬೇಕು. ವರದಿ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ನೀಡಲಿದೆ. ವರದಿ ಬಿಡುಗಡೆ ಮಾಡಲು ಹಿಂದೇಟು ಹಾಕುತ್ತಾ ಹೋದರೆ, ಗೊಂದಲ ಮುಂದುವರಿಯುತ್ತಲೇ ಹೋಗುತ್ತದೆ.

ಕೆ.ಪಿ. ನಂಜುಂಡಿ ವಿಶ್ವಕರ್ಮ, ಬಿಜೆಪಿ ಸದಸ್ಯ

ಮಠಾಧೀಶರ ನೇತೃತ್ವದಲ್ಲಿ ನೂರಾರು ಕಿ.ಮೀ. ಪಾದಯಾತ್ರೆ, ಧರಣಿ ನಡೆಯುತ್ತಿದೆ. ಇದನ್ನು ಶಮನ ಮಾಡಬೇಕಾದರೆ ಹಿಂದುಳಿದ ವರ್ಗಗಳ ಆಯೋಗದ ವರದಿ ಸ್ವೀಕಾರ ಮಾಡಿ, ಅದರ ಬಗ್ಗೆ ಚರ್ಚೆ ನಡೆಯಬೇಕು. ಈಗಾಗಲೇ ವೈಜ್ಞಾನಿಕವಾಗಿ ವರದಿ ಸಿದ್ಧಪಡಿಸಿರುವಾಗ ತ್ರಿಸದಸ್ಯ ಸಮಿತಿ ನೇಮಕ ಮಾಡುವ ಅಗತ್ಯವೇನಿದೆ?

ಎಚ್.ವಿಶ್ವನಾಥ್, ಬಿಜೆಪಿ ಸದಸ್ಯ

ಹಿಂದುಳಿದ ವರ್ಗಗಳ ಆಯೋಗದ ವರದಿ ಬಗ್ಗೆ ಸರ್ಕಾರ ಮೀನಮೇಷ ಎಣಿಸಬಾರದು. ಇದಕ್ಕೆ ತಾರ್ಕಿಕ ಅಂತ್ಯ ಹಾಡಬೇಕಿದೆ. ಆಮರಣಾಂತ ಉಪವಾಸ ಮಾಡುವುದಾಗಿ ಸ್ವಾಮೀಜಿಗಳು ಹೇಳಿದ್ದಾರೆ. ಇದಕ್ಕೆ ಸರ್ಕಾರ ಅವಕಾಶ ಮಾಡಿಕೊಡಬಾರದು.

ಎಸ್.ಆರ್. ಪಾಟೀಲ್, ಪ್ರತಿಪಕ್ಷ ನಾಯಕ